ಅ.ದಾ ಸಂಖ್ಯೆ 191/14 ಪಿ.ಡಬ್ಲ್ಯೂ: 1

ದಿನಾಂಕ: 21-12-2018

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣವಚನವನ್ನು ಬೋಧಿಸಲಾಯಿತು.

**ಮುಂದುವರಿದ ಪಾಟಿಸವಾಲು:** 5 ನೇ ಪ್ರತಿವಾದಿಯಿಂದ

ದಾವಾ ಆಸ್ತಿಯ ಖಾತೆಯನ್ನು ಪರಶಿವಯ್ಯನವರ ಹೆಸರಿಗೆ 2001-2002 ನೇ ಸಾಲಿನಲ್ಲಿ ಮಾಡಿಕೊಂಡಿದ್ದಾರೆ. ಸದರಿ ವಿಚಾರ ನನಗೆ 2006 ನೇ ಸಾಲಿನಲ್ಲಿ ಗೊತ್ತಾಗಿತ್ತು. ಪರಶಿವಯ್ಯನವರ ಹೆಸರಿಗೆ ಖಾತೆ ಆಗಿರುವುದನ್ನು ನನ್ನ ತಾಯಿಯವರು ಗೌರವಾನ್ವಿತ ಉಚ್ಛನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದರು ಎಂದರೆ ಸರಿ. 1992 ನೇ ಸಾಲಿನಲ್ಲಿ ಗೌರವಾನ್ವಿತ ಉಚ್ಚ,ನ್ಯಾಯಾಲಯದಲ್ಲಿ ಉಪ-ವಿಭಾಗಾಧಿಕಾರಿಗಳವರ ಆದೇಶವನ್ನು ರದ್ದುಪಡಿಸಿ ಪುನರ್ವಿಚಾರಣೆಗೆ ಪ್ರಕರಣವನ್ನು ವಾಪಸ್ ಕಳುಹಿಸಿದ್ದರು

ಎಂದರೆ ಇರಬಹುದು. ನಂತರ ಉಪ-ವಿಭಾಗಾಧಿಕಾರಿಗಳವರ ನ್ಯಾಯಾಲಯದಲ್ಲಿ ನನ್ನ ತಾಯಿಯವರು ವಕೀಲರ ಮೂಲಕ ಸದರಿ ಪ್ರಕರಣದಲ್ಲಿ ಹಾಜರಾಗಿದ್ದರು ಎಂದರೆ ಸರಿ. ತಾ. 15-12-2000 ರಂದು ಉಪ-ವಿಬಾ,ಗಾಧಿಕಾರಿಗಳು ದಾವಾ ಆಸ್ತಿಯ ಖಾತೆಯನ್ನು ಪರಶಿವಯ್ಯನವರ ಹೆಸರಿಗೆ ಬರೆಯಬೇಕೆಂದು ಪುನಃ ಆದೇಶಿಸಿದ್ದರು ಎಂದರೆ ಸುಳ್ಳು. ಸದರಿ ಆದೇಶವನ್ನು ನನ್ನ ತಾಯಿಯವರು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದರು ಎನ್ನುವುದು ಸರಿ. ಜಿಲ್ಲಾಧಿಕಾರಿಗಳವರ ಆದೇಶವನ್ನು ಪ್ರತಿವಾದಿಗಳು ಗೌರವಾನ್ವಿತ ಉಚ್ಚ-ನ್ಯಾಯಾಲಯದ ಮುಂದೆ ಪ್ರಶ್ನೆ ಮಾಡಿದ್ದರು ಎಂದರೆ ಸರಿ. ಸದರಿ ಗೌರವಾನ್ವಿತ ಉಚ್ಚ,ನ್ಯಾಯಾಲಯದಲ್ಲಿ ಉಪ-ವಿಭಾಗಾಧಿಕಾರಿಗಳವರು ಮಾಡಿದ ಆದೇಶ ಸರಿ ಎಂದು ಆದೇಶ ಮಾಡಲಾಗಿತ್ತು ಎಂದರೆ ಸರಿಯಲ್ಲ. ಗೌರವಾನ್ವಿತ ಉಚ್ಚನ್ಯಾಯಾಲಯದಲ್ಲಿ ಆದೇಶವಾದ ನಂತರ ನನ್ನ ತಾಯಿಯವರು ಸಿವಿಲ್

ನ್ಯಾಯಾಲಯದಲ್ಲಿ ದಾವೆ ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಅರ್ಜಿ ಹಾಕಿದ್ದೆ ಎಂದರೆ ಸರಿ. ಸದರಿ ಅರ್ಜಿಯ ಜೊತೆಗೆ ನಾನು ನನ್ನ ಪ್ರಮಾಣಪತ್ರವನ್ನು ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಮಾಣಪತ್ರಕ್ಕೆ ನನ್ನ ತಾಯಿ ಸಹಿ ಮಾಡಿದ್ದಾರೆ ಎಂದರೆ ನನಗೆ ಅಷ್ಟೊಂದು ಜ್ಞಾಪಕವಿಲ್ಲ. ನನ್ನ ತಾಯಿಯವರು ದಾಖಲು ಮಾಡಿದ್ದ ಸದರಿ ದಾವೆಯನ್ನು ಈಗ ವಜಾ ಮಾಡಲಾಗಿದೆ. ಸದರಿ ದಾವೆಯಲ್ಲಿ ನಾನು ಹಾಕಿದ್ದ ಅರ್ಜಿಯನ್ನು ವಜಾ ಮಾಡಲಾಗಿತ್ತು ಎಂದರೆ ಇರಬಹುದು. ಸದರಿ ಆದೇಶವನ್ನು ಗೌರವಾನ್ವಿತ ಉಚ್ಚ,ನ್ಯಾಯಾಲಯದಲ್ಲಿ ನಾನು ಪ್ರಶ್ನೆ ಮಾಡಿದ್ದೇನೆ ಎಂದರೆ ಸರಿ. ಸದರಿ ಗೌರವಾನ್ವಿತ ಉಚ್ಚ,ನ್ಯಾಯಾಲಯ ಸಿವಿಲ್ ದಾವೆ ದಾಖಲು ಮಾಡಲು ಅನುಮತಿ ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪರಶಿವಯ್ಯನ ಹೆಸರಿಗೆ ಖಾತೆ ಆಗಿರುವುದನ್ನು ನಾನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಉಪ-ವಿಭಾಗಾಧಿಕಾರಿಗಳು ಸಿವಿಲ್ ನ್ಯಾಯಾಲಯಲ್ಲಿ

ದಾವೆ ಹೂಡಲು ಆದೇಶಿಸಿದ್ದರು. ಉಪ-ವಿಭಾಗಾಧಿಕಾರಿಗಳ ಮುಂದೆ ಯಾವುದೇ ಅರ್ಜಿ ಹಾಕಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿಯವರು ದಾವಾ ಸ್ವತ್ತಿಗೆ ಮಾಲೀಕಳಲ್ಲ ಮತ್ತು ಅದರ ಬಗ್ಗೆ ಯಾವುದೇ ವ್ಯವಸ್ಥಾಪತ್ರ ಮಾಡಿಲ್ಲ ಎಂದರೆ ಸರಿಯಲ್ಲ. ವವಸ್ಥಾಪತರದ ಪ್ರಕಾರ ದಾವಾ ಆಸ್ತಿಯ ಬಾಬ್ತು ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿಲ್ಲ, ಅದರ ಬಗ್ಗೆ ನನಗೆ ಅಷ್ಟು ಅನುಭವ ಇರಲಿಲ್ಲ, ದಾವಾ ಆಸ್ತಿ ನನ್ನ ಸ್ವಾಧೀನದಲ್ಲಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ

ಸಾಕ್ಷಿಗೆ ಸಾಕ್ಷ್ಯವನ್ನು ಓದಿ ತಿಳಿಸಿ ಹೇಳಿ ಕೇಳಿದಾಗ ಅವರು ಅದನ್ನು ಸರಿ ಇದೆ ಎಂದು ಒಪ್ಪಿದ್ದಾರೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಕನಕಪುರ.